ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು - 1

ಸಂಖ್ಯೆ:ಎಂ6/ಅದಾ/ಅ.ಕೋ/ಅ.ನಂ.3/09-10 ದಿನಾಂಕ:02-07-2013

## ಜ್ಞಾಪನಾ

**ವಿಷಯ :** ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಅಗ್ನಿನಂದಕಗಳನ್ನು ಅಳವಡಿಸಿರುವ ಬಗ್ಗೆ.

**ಉಲ್ಲೇಖ :** ಈ ಕಛೇರಿ ಸುತ್ತೋಲೆ ಸಂಖ್ಯೆ :ಎಂ6/ಅದಾ/ಅ.ಕೋಣೆ/ಆ.ಶಾ.ಸಂ. 03(1)09-10, ದಿನಾಂಕ :25-5-2010.

* * * * *

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಮಕ್ಕಳ ಸುರಕ್ಷತೆಯ ಹಿತದೃಷ್ಟಿಯಿಂದ ಎಲ್ಲಾ ಶಾಲೆಗಳಲ್ಲೂ ಕಡ್ಡಾಯವಾಗಿ ಅಗ್ನಿನಂದಕಗಳನ್ನು ಅಳವಡಿಸುವಂತೆ ಆದೇಶವಾಗಿದ್ದು, ಅದರಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಡಿ.ಜಿ.ಎಸ್.&ಡಿ. ರವರು ನಿಗದಿಪಡಿಸಿರುವ ರೇಟ್ ಕಾಂಟ್ರಾಕ್ಟ್ ಅನ್ವಯ 5.ಕೆ.ಜಿ. ಪ್ರಮಾಣದ ಅಗ್ನಿನಂದಕಗಳನ್ನು ಖರೀದಿಸಿ ಅಳವಡಿಸುವಂತೆ ಹಾಗೂ ಡ್ರೈ ಪೌಡರ್‌ನ್ನು ಅಂಗೀಕೃತ ಅಂಗಡಿಯಿಂದ ಖರೀದಿಸುವಂತೆ ಉಲ್ಲೇಖದ ಸುತ್ತೋಲೆಯಲ್ಲಿ ತಿಳಿಸಲಾಗಿತ್ತು.

ಅಗ್ನಿನಂದಕಗಳನ್ನು ಶಾಲೆಗಳಲ್ಲಿ ಅಳವಡಿಸಿ ಅದಕ್ಕೆ ಬೇಕಾದ ಡ್ರೈ ಪೌಡರ್ ಖರೀದಿಸಿ ಮೂರು ವರ್ಷಗಳು ಆಗಿರುತ್ತದೆ. ಡ್ರೈ ಪೌಡರ್‌ನ್ನು ತುಂಬಿಸಿ ವಾಯಿದೆ ಮುಗಿದಿರುವ ಅಗ್ನಿನಂದಕಗಳಿಗೆ ಹೊಸದಾಗಿ ಡ್ರೈ ಪೌಡರ್ ತುಂಬಿಸುವ ಅವಶ್ಯಕತೆ ಇರುತ್ತದೆ.

ಆದಕಾರಣ, ಅಗ್ನಿನಂದಕ ಉಪಕರಣಕ್ಕೆ ಬೇಕಾಗಿರುವ ಡ್ರೈ ಪೌಡರ್‌ನ್ನು ಅಧಿಕೃತ ಸಂಸ್ಥೆಗಳಿಂದ ನಿಯಮಾನುಸಾರ ಖರೀದಿಸಿ ಮರುತುಂಬಿಸಲು ಶಾಲೆಯಲ್ಲಿರುವ ಶಾಲಾ ಅನುದಾನ/ಶಾಲಾ ಸಂಚಿತ ನಿಧಿ (ಚಾಲ್ತಿ/ಸಂಚಿತ) ಖಾತೆಯಲ್ಲಿ ಲಭ್ಯವಿರುವ ಹಣವನ್ನು ಬಳಸಲು ಅನುಮತಿ ನೀಡಿದೆ.

(ಎಸ್.ಆರ್. ಉಮಾಶಂಕರ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

**ಪ್ರತಿಯನ್ನು :**

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಇವರಿಗೆ ಮುಂದಿನ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

**"MDMS is truly god's works. Which we are all privileged to carry out. A little effort on your part will ensure that millions of poor Indian school children get nutritious midday meals along with education-by MHRD"**